**ದಿನಾಂಕ 09-10-2025 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು : ಶ್ರೀ.ಎಮ್.ಎಮ್.ಟಿ ವಕೀಲರಿಂದ ಪ್ರತಿವಾದಿ-1 ಪರವಾಗಿ**

1. ನೀವು ದಿ:01.09.2025 ರಂದು ದಾಖಲಾತಿಗಳನ್ನು ಹಾಜರಪಡಿಸಿದ್ದು, ಯಾವ ಕಾರಣಕ್ಕಾಗಿ ಸದರಿ ದಾಖಲಾತಿಗಳನ್ನು ಹಾಜರಪಡಿಸಿದ್ದೀರಿ ಎಂದರೆ ಆಸ್ತಿ ನನ್ನ ಹೆಸರಿನಲ್ಲಿ ಇಲ್ಲ ಎಂದು ತೋರಿಸಲು ಹಾಜರಪಡಿಸಿದ್ದೇನೆ ಎಂದು ಹೇಳುತ್ತಾರೆ. ನೀವು ಸದರಿ ದಾಖಲಾತಿಗಳನ್ನು ಹಾಜರಪಡಿಸಲು ಅನುಮತಿ ಕೋರಿ ಸಲ್ಲಿಸಿದ ಅರ್ಜಿಯೊಂದಿಗೆ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಸದರಿ ದಾಖಲಾತಿಗಳು ಪ್ರಕರಣಕ್ಕೆ ಮಹತ್ವಪೂರ್ಣವಾಗಿವೆ ಎಂದು ಮತ್ತು ವಿಭಾಗ ಪತ್ರ ಸುಳ್ಳು ಎಂದು ಪುಷ್ಠಿಕರಿಸಲು ಹಾಜರಪಡಿಸಿದ್ದೀರಿ ಎಂದರೆ ಸರಿ. ನೀವು ಹಾಜರಪಡಿಸಿದ ದಾಖಲಾತಿಗಳ ಬಗ್ಗೆ ಮತ್ತು ದಾಖಲಾತಿಗಳ ನಮೂದಿಸಿದ ಆಸ್ತಿಗಳ ಬಗ್ಗೆ ನಿಮ್ಮ ವಾದ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಈ ದಾವೆಯೊಂದಿಗೆ ಹಾಜರಪಡಿಸಿದ ವಿಭಾಗ ಪತ್ರವನ್ನು ನಾನು ನೋಡಿದ್ದೇನೆ. ನೀವು ಹಾಜರಪಡಿಸಿದ ಸರ್ವೆ ನಂ.9/3 ಹೊರತುಪಡಿಸಿ ಉಳಿದ ಎಲ್ಲಾ ಆಸ್ತಿಗಳು ವಿಭಾಗ ಪತ್ರದಲ್ಲಿ ನಮೂದು ಇವೆ ಎಂದರೆ ನಮೂದು ಇವೆ, ಆದರೆ ಖೊಟ್ಟಿ ದಾಖಲಾತಿ ಎಂದು ಸಾಕ್ಷಿ ಹೇಳುತ್ತಾರೆ. ನಿಮ್ಮ ತಂದೆ ತಮ್ಮ ಜೀವಿತಾವಧಿಯಲ್ಲಿ ವಿಭಾಗ ಪತ್ರದಲ್ಲಿ ನಮೂದಿಸಿದ ಆಸ್ತಿಗಳು ಒಟ್ಟು ಕುಟುಂಬದ ಅಸ್ತಿಗಳು ಅಲ್ಲ ಎಂದು ತಮ್ಮ ಜೀವಿತಾವಧಿಯಲ್ಲಿ ಎಲ್ಲಿಯು ಪ್ರಶ್ನಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ.

2. ನಿಮ್ಮ ತಂದೆಯವರು ಸಲ್ಲಿಸಿದ ಓ.ಎಸ್.ನಂ.144/1992 ರಲ್ಲಿ ಸಹ ನಿಡಿ-4 ವಿಭಾಗ ಪತ್ರದ ಬಗ್ಗೆ ನಮೂದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನೀವು ಹಾಜರಪಡಿಸಿದ ದಾಖಲಾತಿಗಳಿಗೂ ಮತ್ತು ಈ ದಾವೆಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಕೇವಲ ಕಾಲಹರಣ ಮಾಡಲು ಈ ದಾವೆಗಳನ್ನು ಹಾಜರಪಡಿಸಿದ್ದೀರಿ ಎಂದರೆ ಸರಿಯಲ್ಲ.

ಪ್ರತಿವಾದಿ-3 ಮತ್ತು 4 ಪರ ವಕೀಲರು ಗೈರು ಹಾಜರ ಇದ್ದು, ಸಮಯಾವಕಾಶ ನೀಡಲು ಯಾವುದೇ ಸಕಾರಣಗಳು ಇಲ್ಲದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ